ಕೊಲೆ, ಸುಲಿಗೆಗಳು ಆಗುತ್ತಿದ್ದವು ಈಗ 2–3 ವರ್ಷಗಳಿಂದ ಅವು ನಿಂತಿವೆ ನಾನೂ ಕೂಡ ಹೋಗಿ ಪೊಲೀಸರ ತರಹ ಅಲ್ಲಿನ ಹೋಟೆಲ್‌ಗಳನ್ನೆಲ್ಲಾ ಚೆಕ್ ಮಾಡಿದೆ ನಾನು ಪೊಲೀಸ್ ಸ್ಟೇಷನ್‌ಗೂ ಕೂಡ ಹೋಗಿ ದಾಖಲೆಗಳನ್ನೆಲ್ಲಾ ಚೆಕ್ ಮಾಡಿ ಬಂದಿದ್ದೇನೆ ಆದ್ದರಿಂದ ತಾವು ಹೇಳಿರುವುದನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ನಾನು ಸದನಕ್ಕೆ ಮಾತು ಕೊಡುತ್ತಿದ್ದೇನೆ

ಶ್ರೀ ಸಿ ಟಿ ರವಿ – ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವ ಕೆಲಸ ಯಾವಾಗ ಮುಗಿಯುತ್ತದೆ? ಅಲ್ಲಿ ಈಗ 60ಕ್ಕೂ ಹೆಚ್ಚು ಅನಧಿಕೃತ ಕಟ್ಟಡಗಳಿವೆ ಎಂದು ಇಲ್ಲಿ ಪೂರ್ಣ ವರದಿಯನ್ನು ಕೊಟ್ಟಿದ್ದಾರೆ ಅವುಗಳನ್ನೆಲ್ಲಾ ಯಾವಾಗ ತೆರವುಗೊಳಿಸುತ್ತೀರಿ?

ಶ್ರೀ ಎಂ ಪಿ ಪ್ರಕಾಶ್ – ಕಾನೂನಿನ ಪ್ರಕಾರ ಹಂಪಿ ಪ್ರಾಧಿಕಾರದ ಅಧ್ಯಕ್ಷರು ಅವರಿಗೆ ನೋಟೀಸ್ ಅನ್ನು ಕೊಟ್ಟಿದ್ದಾರೆ ಹಂಪಿಯ ಪಂಚಾಯಿತಿಯವರೂ ಕೂಡ ನೋಟೀಸ್ ಅನ್ನು ಕೊಟ್ಟಿದ್ದಾರೆ ಕೆಲವರು ಮಾತ್ರ ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ ಅದರ ಬಗ್ಗೆ ತತ್‌ಕ್ಷಣದಲ್ಲಿ ನನಗೆ ವಿವರಗಳು ಗೊತ್ತಿಲ್ಲ ಆದರೆ ಖಂಡಿತವಾಗಿಯೂ ಕೂಡ ಅತಿಕ್ರಮಣ ಮಾಡಿರತಕ್ಕವರ ಮೇಲೆ ನಾವು ಕ್ರಮವನ್ನು ಕೈಗೊಳ್ಳುತ್ತೇವೆ

(ಊ) ಆರಾಧನಾ ಯೋಜನೆಯಡಿಯಲ್ಲಿ ತಾಲ್ಲೂಕು ಕಚೇರಿಗಳಲ್ಲಿದ್ದ 1992ನೇ ಇಸವಿಯಿಂದ 2005–06 ರವರೆಗೆ ಇದ್ದ ಹಣವನ್ನು ವಾಪಸ್ ಪಡೆದಿರುವ ಬಗ್ಗೆ

ಶ್ರೀ ಹೆಚ್ ಎಂ ವಿಶ್ವನಾಥ್ (ಸಕಲೇಶಪುರ) – ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸರ್ಕಾರದವರು ಆದೇಶವೊಂದನ್ನು ಹೊರಡಿಸಿ, ಆರಾಧನಾ ಯೋಜನೆ ಅಡಿಯಲ್ಲಿ 1992ನೇ ಇಸವಿಯಿಂದ 2005–06ರವರೆಗೆ ಏನು ಹಣ, ಆಯಾಯ ತಾಲ್ಲೂಕು ಕಚೇರಿಗಳಲ್ಲಿ ಇತ್ತೋ, ಆ ಹಣವನ್ನೆಲ್ಲಾ ಸರ್ಕಾರದವರು ಪೂರ್ತಿಯಾಗಿ ವಾಪಸ್ ಪಡೆಯುವಂತಹ ಕೆಲಸ ಮಾಡಿದೆ ಇದರಿಂದ ರಾಜ್ಯದ 27 ಜಿಲ್ಲೆಗಳಿಂದ ಸುಮಾರು 20 75 ಕೋಟಿ ರೂಪಾಯಿಗಳಷ್ಟು ಹಣವನ್ನು ಸರ್ಕಾರದವರು ವಾಪಸ್ ಪಡೆದಿದ್ದಾರೆ ದಯಮಾಡಿ ನಾನು ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ, ಈ ಹಣವನ್ನು ಬಳಸಿಲ್ಲ ಸರಿ, ಆದರೆ ಅದನ್ನು ವಾಪಸ್ ಪಡೆಯಬೇಡಿ ನಮಗೆ

ಇನ್ನೂ ಹದಿನೈದು ದಿವಸಗಳ ಟೈಮ್ ಕೊಡಿ ಅಷ್ಟರೊಳಗೆ ನಾವು ಈ ಪೂರ್ಣ ಹಣವನ್ನು ಕೊಡುವಂತಹ ಕೆಲಸ ಮಾಡುತ್ತೇವೆ ಏಕೆಂದರೆ, ಒಂದು ವರ್ಷಕ್ಕೆ 5 ಲಕ್ಷ ರೂಪಾಯಿಗಳ ಹಣ ಕೂಡ ಒಂದು ತಾಲ್ಲೂಕಿಗೆ ಬರುವುದಿಲ್ಲ ನಾವು ದೊಡ್ಡ ಸಂಖ್ಯೆಯಲ್ಲಿರುವ ದೇವಸ್ಥಾನಗಳಿಗೆ, ಚರ್ಚ್‌ಗಳಿಗೆ ಮತ್ತು ಮಸೀದಿಗಳಿಗೆ ಹಣ ಕೊಡಬೇಕೆಂದರೆ ನೀವು ಅದಕ್ಕಾಗಿ ಕೊಡುವಂತಹ ಹಣ ಸಾಕಾಗುವುದಿಲ್ಲ ನಮ್ಮ ಜಿಲ್ಲೆಯೊಂದರಿಂದಲೇ ಸುಮಾರು 50 ಲಕ್ಷ ರೂಪಾಯಿಗಳಷ್ಟು ಹಣ ವಾಪಸ್ ಹೋಗುತ್ತಿದೆ ಅದರಲ್ಲೂ ನಮ್ಮ ತಾಲ್ಲೂಕ್‌ವೊಂದರಿಂದಲೇ 15 ಲಕ್ಷ ರೂಪಾಯಿಗಳು ಹೋಗುತ್ತಿದೆ ದಯಮಾಡಿ ಇದನ್ನು ವಾಪಸ್ ನಮಗೆ ಬಿಡುಗಡೆ ಮಾಡಿಕೊಟ್ಟರೆ, ಈ ಹಣವನ್ನು ನಾವು 15 ದಿವಸದೊಳಗೆ ಖರ್ಚು ಮಾಡುತ್ತೇವೆ ಸರ್ಕಾರದವರು ತಮ್ಮ ಆದೇಶವನ್ನು ರದ್ದುಪಡಿಸಿ, ಅಲ್ಲೇ ಹಣವನ್ನು ಬಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಜಿ ಚಂದ್ರಣ್ಣ (ದೇವನಹಳ್ಳಿ) – ಮಾನ್ಯ ಅಧ್ಯಕ್ಷರೆ, ಅನೇಕ ಕಡೆಗಳಲ್ಲಿ ಸಮಿತಿಗಳೇ ರಚನೆಯಾಗಿಲ್ಲ ಆ ಕೆಲಸ ಕೂಡ ಆಗಬೇಕಾಗಿದೆ ಈ ಹಿನ್ನೆಲೆಯಲ್ಲಿ ಹಣ ಮಂಜೂರು ಮಾಡುವುದು ಮತ್ತು ವಾಪಸ್ ತೆಗೆದುಕೊಳ್ಳುವುದು ಎಂದರೆ, ಅದೊಂದು ಸ್ವಲ್ಪ ವ್ಯತ್ಯಾಸವಾಗುತ್ತದೆ ದಯಮಾಡಿ ಈ ಹಣವನ್ನು ವಾಪಸ್ ತೆಗೆದುಕೊಳ್ಳಬಾರದು ಅದನ್ನು ಅಲ್ಲೇ ಉಳಿಸಬೇಕೆಂದು ನಾನೂ ಕೂಡ ಒತ್ತಾಯಿಸುತ್ತೇನೆ

ಶ್ರೀ ಹೆಚ್ ನಿಂಗಪ್ಪ (ಕುಣಿಗಲ್) – ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಆದೇಶವನ್ನು ಮಾಡಿರತಕ್ಕದ್ದು ಹಣವನ್ನು ಖರ್ಚು ಮಾಡಿಲ್ಲವೆಂಬ ಕಾರಣಕ್ಕೆ ಹಣ ಖರ್ಚು ಮಾಡಬೇಕಾದರೆ ಆರಾಧನಾ ಸಮಿತಿಗಳೇ ರಚನೆಯಾಗಿರಲಿಲ್ಲ ಈ ಸಮಿತಿಗಳು ರಚನೆಯಾಗಿಲ್ಲ ಎಂಬ ಕಾರಣಕ್ಕಾಗಿಯೇ ಹಣ ಖರ್ಚಾಗಿಲ್ಲ ಕರ್ನಾಟಕ ರಾಜ್ಯದಲ್ಲಿ ಬಿಡುಗಡೆಯಾಗಿದ್ದಂತಹ ಸುಮಾರು 20 ಕೋಟಿ ರೂಪಾಯಿಗಳಷ್ಟು ಹಣವನ್ನು ವಾಪಸ್ ಪಡೆಯತಕ್ಕಂಥ ಆದೇಶ ಸರ್ಕಾರದಿಂದ ಹೊರಬಿದ್ದಿದೆ ಆದ್ದರಿಂದ ಇವತ್ತು ಬಹಳ ತೊಂದರೆಯಾಗುತ್ತಿದೆ ಏನೊಂದು ಹಣ ಆಯಾ ತಾಲ್ಲೂಕಿನಲ್ಲಿ ಅಥವಾ ಆಯಾ ಕ್ಷೇತ್ರದಲ್ಲಿತ್ತೋ, ಅದನ್ನು ವಾಪಸ್

ಮಾಡಿ ಮತ್ತೆ ಮರು ಆದೇಶ ಮಾಡಲಿಕ್ಕೆ ಸಂಬಂಧಪಟ್ಟ ಮಂತ್ರಿಗಳು ಅದಕ್ಕೆ ಸೂಚನೆ ಕೊಡಬೇಕೆಂದು ನಾನು ಇವತ್ತು ತಮ್ಮ ಮುಖೇನ ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಎಂ ಮಹದೇವ (K.R.ನಗರ) – ಮಾನ್ಯ ಸಚಿವರ ಗಮನಕ್ಕೆ ನಾನು ತರಬಯಸುವುದೇನೆಂದರೆ, ಆರಾಧನಾ ಸಮಿತಿಗಳು ರಚನೆಯಾಗಿಲ್ಲವೆಂಬ ಕಾರಣಕ್ಕಾಗಿ ತಹಶೀಲ್ದಾರ್‌ರವರು ಹಣವನ್ನು ಬಿಡುಗಡೆ ಮಾಡಲಿಕ್ಕೆ ಒಪ್ಪುತ್ತಿಲ್ಲ ಆದರೆ ಸಮಿತಿಯ ಅಧ್ಯಕ್ಷರು ಶಾಸಕರೇ ಆಗಿರಬೇಕೆಂದು ಸುತ್ತೋಲೆ ಕೂಡ ಇದೆ Because of lack of members ಇದನ್ನು ಉಪಯೋಗ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ Members formation ಆಗದಿದ್ದರೂ ಸಹ, ಕನಿಷ್ಟ ಶಾಸಕರು ಹಾಗೂ ತಹಶೀಲ್ದಾರ್‌ರವರು ಕುಳಿತು ಇದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ, ಇನ್ನು 15 ದಿವಸಗಳಲ್ಲಿ ಈ ಹಣವನ್ನು ನಾವು ಉಪಯೋಗ ಮಾಡುತ್ತೇವೆ.

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಅಧ್ಯಕ್ಷರೆ, ಅದರಲ್ಲಿ ಇನ್ನೊಂದು ತೊಂದರೆ ಇದೆ ನಾವು ಅವರಿಗೆ 20–25 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ನಿಮ್ಮ ಡಿ ಸಿ ಯವರು ಅದಕ್ಕೆ estimate ಮಾಡಿಸಿಕೊಂಡು ಬನ್ನಿ ಎಂದು ಹೇಳುತ್ತಾರೆ 4 ಲಕ್ಷ ರೂಪಾಯಿಗಳಿಗೆ ಬಿಲ್ಡಿಂಗ್‌ವೊಂದನ್ನು ಕಟ್ಟಲು estimate ಮಾಡಿದ್ದರೆ, ಆ estimates ಅನ್ನು ತಂದು ಇವರಿಗೆ ಕೊಡುವುದಕ್ಕೆ 5% ನಂತೆ estimate ಮಾಡುವವನು ಕಮಿಷನ್ ತೆಗೆದುಕೊಂಡಿರುತ್ತಾನೆ 20 ಸಾವಿರ ರೂಪಾಯಿಗಳು ಬರೀ estimates ತಂದು ಕೊಡುವುದಕ್ಕೆ ವೆಚ್ಚವಾಗುತ್ತದೆ ಈ ತೊಂದರೆಯಿಂದ ಆ ಹಣ ಹಾಗೆಯೇ ಉಳಿದಿದೆ 25 ಸಾವಿರ ರೂಪಾಯಿಗಳನ್ನು ಕೊಟ್ಟು estimate ಮಾಡಿಸಿ 2–3 ಲಕ್ಷ ರೂಪಾಯಿಗಳ ವೆಚ್ಚದ ಬಿಲ್ಡಿಂಗ್ ಕಟ್ಟಲಿಕ್ಕೆ ಹೊರಟರೆ, ಇವರು ಅದಕ್ಕೆ ಹಣವನ್ನು ಸರಿಯಾಗಿ ರಿಲೀಸ್ ಮಾಡುವುದಿಲ್ಲ ಆ ಕಾರಣದಿಂದಲೂ ಅಲ್ಲಿ ದುಡ್ಡು ಉಳಿದಿದೆ ನಾವು ಮಂಜೂರು ಮಾಡಿಕೊಟ್ಟರೂ ಸಹಿತ, ಆ ಹಣವನ್ನು ಇವತ್ತಿನವರೆಗೂ ರಿಲೀಸ್ ಮಾಡಿಲ್ಲ ಎರಡು ವರ್ಷಗಳಿಂದ ಅವುಗಳು ಹಾಗೆಯೇ ಬಿದ್ದಿವೆ ಹಲವಾರು ಸಲ ಡಿ ಸಿ ಆಫೀಸ್‌ಗೆ ಓಡಾಡುವಂತೆ ಮಾಡಿ ಆ ಹಣವನ್ನು ತೆಗೆದುಕೊಳ್ಳದಂತೆ ಮಾಡಿದ್ದಾರೆ ಆ ಕಾರಣದಿಂದ ಅದನ್ನೂ ಕೂಡ

ಸರಳೀಕರಣ ಮಾಡಿದರೆ, ಅದು ಸರಿಯಾಗುತ್ತದೆ ದಯವಿಟ್ಟು ಆ ರೊಕ್ಕವನ್ನು ಮತ್ತೆ ವಾಪಸ್ ತೆಗೆದುಕೊಳ್ಳಬಾರದು ಎಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಜಿ ಚಂದ್ರಣ್ಣ – ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಒಂದು ಪ್ರತ್ಯೇಕವಾದ ಚರ್ಚೆಯನ್ನೇ ಮಾಡಲು ಅವಕಾಶ ಕೊಡಿ ಈ ವಿಚಾರ ಬಹಳ ಗಂಭೀರವಾಗಿದೆ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) – ಮಾನ್ಯ ಅಧ್ಯಕ್ಷರೆ, ಈ ವಿಚಾರ ಮುಜರಾಯಿ ಇಲಾಖೆ ಉಸ್ತುವಾರಿ ಹೊತ್ತಿರುವ ಮಾನ್ಯ ನಾಗರಾಜಶೆಟ್ಟಿಯವರ ವ್ಯಾಪ್ತಿಗೆ ಬರುತ್ತದೆ ಈ ವಿಷಯವನ್ನು ನಾನು ಅವರ ಗಮನಕ್ಕೆ ತಂದು, ಇಲ್ಲೇನು ತೊಂದರೆಗಳಾಗಿವೆಯೋ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ ಆರಾಧನಾ ಸಮಿತಿಗೆ ಹಣವನ್ನೇನು ಮಂಜೂರು ಮಾಡಲಾಗಿರುತ್ತದೆಯೋ, ಆ ಹಣ lapse ಆಗುವುದಿಲ್ಲ ಈಗೇನು 20 ಕೋಟಿ ರೂಪಾಯಿಗಳ ಹಣ ವಾಪಸ್ ಪಡೆಯಲಾಗಿದೆ ಎಂದು ಹೇಳುತ್ತಿದ್ದಾರೋ, ಅದು ಆರಾಧನಾ ಸಮಿತಿಗೆ ಅಲಾಟ್ ಮಾಡಿದಂತಹ ಹಣವಲ್ಲ ಅದು ಮುಜರಾಯಿ ಇಲಾಖೆಯಿಂದ ನೇರವಾಗಿ ಕೆಲವೊಂದು ದೇವಸ್ಥಾನದ ಟ್ರಸ್ಟ್‌ಗಳಿಗೆ ಕೊಟ್ಟಿರುವಂತಹ ಹಣವಾಗಿದೆ ಆರಾಧನಾ ಸಮಿತಿಗೆ ಕೊಟ್ಟಿರುವಂಥಾದ್ದು lapse ಆಗುವುದಿಲ್ಲ ಎಲ್ಲೆಲ್ಲಿ ಆರಾಧನಾ ಸಮಿತಿಗಳು ಆಗಿಲ್ಲವೋ ಅಂತಹ ಕಡೆಗಳಲ್ಲಿ ಆದಷ್ಟು ಬೇಗನೆ ಅದನ್ನು constitute ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ

(ಗೊಂದಲ)

ಅಧ್ಯಕ್ಷರು – ಆಯಿತು, ಅದರ ಬಗ್ಗೆ ಸ್ಪಷ್ಟವಾಗಿ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ

(ಗೊಂದಲ)

ಶ್ರೀ ಹೆಚ್ ಎಂ ವಿಶ್ವನಾಥ್ – ಮಾನ್ಯ ಅಧ್ಯಕ್ಷರೆ, ಇವರು ತಮ್ಮ ಆದೇಶದಲ್ಲಿ ಸ್ಪಷ್ಟವಾಗಿ ಹಾಗೆಯೇ ಕೊಟ್ಟಿದ್ದಾರೆ "ಆರಾಧನಾ ಹಣವನ್ನು ವಿತರಣೆ ಮಾಡಲು

ಅವಕಾಶವಿದ್ದರೂ ಸಹ, ಯೋಜನೆ ಅಡಿಯಲ್ಲಿ ಮಂಜೂರಾದ ಅನುದಾನ ಹಾಗೂ ಅನುದಾನದ ಮೇಲೆ ಸಂಗ್ರಹವಾದ ಬಡ್ಡಿ ಹಣ 1999 ರಿಂದ 2005–06ರ ಅವಧಿಯಲ್ಲಿ ಅನುಬಂಧ – 1 ರಲ್ಲಿರುವಂತೆ ಬಳಕೆಯಾಗದೇ ಉಳಿದಿದ್ದನ್ನು ಸರ್ಕಾರ ಗಮನಿಸಿ, ಈ ಮೊತ್ತವನ್ನು ರದ್ದುಪಡಿಸಿ ಹಿಂದಕ್ಕೆ ಪಡೆಯಲು ಆದೇಶಿಸಿದೆ' ಎಂದು ಇದೆ ಆರಾಧನಾ ಸಮಿತಿಯ ಹಣವೆಂದು ನೀವು ಆದೇಶದಲ್ಲಿ ಕೊಟ್ಟಿದ್ದೀರಿ

ಶ್ರೀ ಜಗದೀಶ್ ಶೆಟ್ಟರ್ – ಆ ಬಗ್ಗೆ ನಾನು verify ಮಾಡಿಸುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ – ಸುಮ್ಮನೆ ಏನೇನೋ ಹೇಳುವುದಕ್ಕೆ ಹೋಗಬೇಡಿ ಹಣವನ್ನು ವಾಪಸ್ ಪಡೆದುಕೊಂಡಿರುವ ಆದೇಶವನ್ನು ರದ್ದುಪಡಿಸುತ್ತೇವೆ ಎಂಬ ಸ್ಪಷ್ಟವಾದ ಉತ್ತರವನ್ನು ಮಾನ್ಯ ಸಚಿವರು ಇಲ್ಲಿ ಕೊಡಬೇಕು

(ಗೊಂದಲ)

ಅಧ್ಯಕ್ಷರು :– ಸರ್ಕಾರದಿಂದ ಹಣವೇನು ಮಂಜೂರಾಗಿ ಬಂದಿದೆಯೋ, ಅದು ಮತ್ತೆ ವಾಪಸ್ ಹೋಗುತ್ತಿದೆ ಎಂಬ ಭಾವನೆ ಎಲ್ಲರಲ್ಲಿ ಇದೆ ಅದು ವಾಪಸ್ ಹೋಗಿಲ್ಲದಿದ್ದರೆ ಪರವಾಗಿಲ್ಲ ಇಲ್ಲದಿದ್ದರೆ ಆ ಬಗ್ಗೆ ಏನಾದರೂ ಕ್ರಮವೊಂದನ್ನು ತೆಗೆದುಕೊಂಡು ಹಣ ವಾಪಸ್ ಪಡೆಯದಂತೆ ಸೂಚನೆ ಕೊಡಿ

(ಗೊಂದಲ)

ಶ್ರೀ ಎಸ್ ಎಸ್ ಪಾಟೀಲ್ – ಆ ಆದೇಶವನ್ನು ರದ್ದು ಮಾಡಿದ್ದೇವೆ ಆ ಹಣವನ್ನು ನಾವು ಮತ್ತೆ ವಾಪಸ್ ತೆಗೆದುಕೊಳ್ಳುವುದಿಲ್ಲ ಎಂದು ನೀವು ಸರ್ಕಾರದ ಪರವಾಗಿ ಹೇಳಿಕೆ ಕೊಟ್ಟು ಬಿಡಿ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ – ಮಾನ್ಯ ನಾಗರಾಜ್‌ಶೆಟ್ಟರನ್ನು ಕರೆಸಿ ಅವರ ಕಡೆಯಿಂದ ಹೇಳಿಸುತ್ತೇನೆ

ಡಾ॥ ಹೆಚ್ ಸಿ ಮಹದೇವಪ್ಪ (ಟಿ ನರಸೀಪುರ) .– ಮಾನ್ಯ ಅಧ್ಯಕ್ಷರೆ, ಮುಜರಾಯಿ ಇಲಾಖೆಯಲ್ಲಿ ದೇವರ ಹೆಸರಿನಲ್ಲಿ ಕಲೆಕ್ಟ್ ಆದಂತಹ ಹಣದ

ಶೇಕಡ 18 ರಷ್ಟನ್ನು SC/ST welfare ಗಾಗಿ ಖರ್ಚು ಮಾಡುವಂತೆ ಮಾನ್ಯ ಕಂದಾಯ ಸಚಿವರು ವ್ಯವಸ್ಥೆ ಮಾಡಬೇಕು ದೇವಸ್ಥಾನದ ಹಣ ಏನಿರುತ್ತದೋ, ಅದರಲ್ಲಿ ಶೇಕಡ 18 ರಷ್ಟು ಹಣವನ್ನು SC/ST welfare ಗೋಸ್ಕರ ಖರ್ಚು ಮಾಡುವಂತೆ ಮಾಡಬೇಕು ದಯವಿಟ್ಟು ಆ ರೀತಿ ಮಾಡಲು ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕು ತಮಿಳುನಾಡಿನಲ್ಲಿ ಎಲ್ಲಾ untouchables, backward classes ದೇವಸ್ಥಾನಗಳಿಗೆ ಪ್ರಾತಿನಿಧ್ಯ ಕೊಡುತ್ತೇವೆಂದು ಅಲ್ಲಿನ ಸರ್ಕಾರ ಹೇಳಿ, ಅದರಂತೆ ಮಾಡುತ್ತಿದೆ ದೇವಸ್ಥಾನದಿಂದ ಪ್ರತಿಯೊಂದು ಬಾಬ್ತಿನಿಂದ ಬಂದಂತಹ ಹಣದಲ್ಲಿ ಶೇಕಡ 18 ರಷ್ಟನ್ನು SC/ST welfare ಗೆ ಖರ್ಚು ಮಾಡತಕ್ಕಂಥ ಪ್ರಯತ್ನವನ್ನು ಮಾಡಬೇಕು ಎಂದು ಸರ್ಕಾರವನ್ನು ತಮ್ಮ ಮುಖೇನ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಶ್ರೀ ಜಿ ಚಂದ್ರಣ್ಣ – ಆರಾಧನಾ ಯೋಜನೆ ಇರುವುದು ಅದಕ್ಕೇ ಅಲ್ಲವೇ? ಅದಕ್ಕಾಗಿಯೇ ಆರಾಧನಾ ಸಮಿತಿಗಳು ಇದೆ ಅದಕ್ಕೆ ಹಣವನ್ನು ಬಿಡುಗಡೆ ಮಾಡಿಲ್ಲವೆಂದು ನಾವು ಇಲ್ಲಿ ಹೇಳುತ್ತಿದ್ದೇವೆ ಈಗಾಗಲೇ ಬಿಡುಗಡೆ ಮಾಡಿದ ಹಣವನ್ನು ವಾಪಸ್ ತೆಗೆದುಕೊಳ್ಳಬಾರದು ಆ ಹಣವನ್ನು ಸಮಿತಿಗಳ ಮುಖಾಂತರ ಕೊಡಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ ಮಾನ್ಯ ನಾಗರಾಜ ಶೆಟ್ಟರವರು ಸಮಿತಿಗಳನ್ನು ಏತಕ್ಕಾಗಿ ಮಾಡಿಲ್ಲವೆಂಬ ಬಗ್ಗೆ ಇಲ್ಲಿ ಉತ್ತರಿಸಬೇಕು

ಅಧ್ಯಕ್ಷರು .– ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಇದರ ಬಗ್ಗೆ ಸ್ಪಷ್ಟವಾದಂತಹ ಉತ್ತರವೊಂದನ್ನು ಹೇಳಿಬಿಡಿ

ಶ್ರೀ ಹೆಚ್ ಎಂ ವಿಶ್ವನಾಥ್ – ನಮಗೆ ಈ ಬಗ್ಗೆ ಸರ್ಕಾರದಿಂದ ಸ್ಪಷ್ಟವಾದಂತಹ ಉತ್ತರ ಬೇಕಾಗಿದೆ

ಶ್ರೀ ಎಸ್ ಎಸ್ ಪಾಟೀಲ್ – ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಇದು original ಆಗಿ ನಿಮ್ಮ ಖಾತೆಗೆ ಬರುತ್ತದೆ ಬಹಳ ಜನರನ್ನು ಮಂತ್ರಿಗಳನ್ನಾಗಿ ಮಾಡಲಿಕ್ಕೆ ಹೋಗಿ, ಯಾರ್ಯಾರಿಗೋ ಯಾವ್ಯಾವುದೋ ಖಾತೆಗಳನ್ನು ಕೊಟ್ಟು ಬಿಟ್ಟಿದ್ದಾರೆ ಆ ಹಣವನ್ನು ಮತ್ತೆ ವಾಪಸ್ ತೆಗೆದುಕೊಳ್ಳುವುದಿಲ್ಲ ಎಂಬ ಉತ್ತರವನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರೇ ಹೇಳಬೇಕು

(ಗೊಂದಲ)

ಶ್ರೀ ಎಂ ಮಹದೇವ (K.R.ನಗರ) – ಎಲ್ಲಾ ತಾಲ್ಲೂಕುಗಳಲ್ಲಿ ಆರಾಧನ ಸಮಿತಿ ರಚನೆಯಾಗಿಲ್ಲ, ಕೆಲವು ಕಡೆ ಆಗಿದೆ, ಕೆಲವು ಕಡೆ ಆಗಿಲ್ಲ ತಹಸೀಲ್ದಾರ್ ಸಮಿತಿ ರಚನೆಯಾಗದೆ, We are not empowered to spend the money ಎಂದು ಹೇಳುತ್ತಾರೆ ಸಮಿತಿಗೆ ಶಾಸಕರು ಅಧ್ಯಕ್ಷರು, ಸೆಕ್ರೆಟರಿ, ಸದಸ್ಯರಿಲ್ಲದ ಕಾರಣ ಆರಾಧನ ಸಮಿತಿಗೆ ಹಣ ಬಿಡುಗಡೆಯಾಗುತ್ತಿಲ್ಲ, ಖರ್ಚಾಗುತ್ತಿಲ್ಲ ದಯವಿಟ್ಟು, ಸಮಿತಿ ಯಾವಾಗಲಾದರೂ ರಚನೆಯಾಗಲಿ, year ending ಇದೆ, ಇದನ್ನೆಲ್ಲಾ ಉಪಯೋಗಿಸಿಕೊಳ್ಳುವುದಕ್ಕೆ, ತಹಸೀಲ್ದಾರ್ ಮತ್ತು ನಾವೆ ಕುಳಿತು ಈ ಹಣ ಖರ್ಚು ಮಾಡುವುದಕ್ಕೆ ಒಂದು ಕಾರ್ಯಕ್ರಮ ಮಾಡುವುದಕ್ಕೆ, ಹಣ ಬಿಡುಗಡೆ ಮಾಡುವ ಬಗ್ಗೆ ಒಂದು ನಿರ್ದಿಷ್ಟ ಉತ್ತರ ಸಚಿವರಿಂದ ಬೇಕು ಎಲ್ಲಾ ಶಾಸಕರಿಗೂ ಇದೇ ಸಮಸ್ಯೆ ಇದೆ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು) – ಸನ್ಮಾನ್ಯ ಅಧ್ಯಕ್ಷರೆ, ಮುಜರಾಯಿ ಮಂತ್ರಿಗಳಿಗೆ ಈ ಎಲ್ಲಾ ಮಾಹಿತಿಯನ್ನು ಕೊಟ್ಟು, ಅವರಿಂದ ಉತ್ತರವನ್ನು ಕೊಡಿಸುತ್ತೇನೆ

ಡಾ॥ ಹೆಚ್ ಸಿ ಮಹಾದೇವಪ್ಪ – ಸರ್, ಆ ರೀತಿ ಮಾಡಬೇಕೆಂದು instruction ಇದೆ, ನಾನು ಹೇಳಿದ್ದರ ಬಗ್ಗೆ ಸ್ವಲ್ಪ ಹೇಳಿ, ಮಾನ್ಯ ಕಂದಾಯ ಸಚಿವರಿಗೆ ಗೊತ್ತಿದೆ, ಆ ರೀತಿ instruction ಇದೆ, ದಯವಿಟ್ಟು, ನೀವು ಅದನ್ನು ಹೇಳಿಬಿಡಿ

ಶ್ರೀ ಜಗದೀಶ್ ಶೆಟ್ಟರ್ – ಎಲ್ಲೆಲ್ಲಿ SC/ST ಕಾಲೋನಿ ಇದ್ದಾವೋ, ಅಲ್ಲಿಯ ದೇವಸ್ಥಾನಗಳಿಗೆ ಆದ್ಯತೆ ಕೊಡಬೇಕೆಂದು ಆರಾಧನ ಸಮಿತಿಯಲ್ಲಿ specific instruction ಇದೆ, ಅದರ ಪ್ರಕಾರ ನಾನು instruction ಕೊಡಿಸುತ್ತೇನೆ

ಅಧ್ಯಕ್ಷರು – ಈಗ ನಮ್ಮ ಹಣಕಾಸಿನ ಸಚಿವರು ಬಂದ ಹಾಗೆ ಆಗಲಿಲ್ಲ, ಆದುದರಿಂದ ಈಗ ಸದನವನ್ನು ಎರಡುವರೆ ಗಂಟೆಗೆ ಮುಂದೂಡಲಾಗಿದೆ